ಕವಿತೆ



**ಕೆ. ಫಣಿರಾಜ್**

ಕಲೆ: ಎಸ್‌ವಿ. ಹೂಗಾರ್



# ತತ್ವಶಾಸ್ತ್ರ

ಇದ್ದಷ್ಟು ಅಂದದಲ್ಲಿ ಇರುವ
ಇಂದಿನ ಸಂಸಾರ ನಾಳೆ
ಎಂತೋ ಏನೋ ತಿಳಿವುದೆಂತು!

ಅಂಗೈಯಲ್ಲಿರುವ ಬೆಣ್ಣೆಯಷ್ಟೇ
ಮೃದು ಸುಣ್ಣ ವ್ಯತ್ಯಾಸ
ಏನೆಂದು ಕಾಣ್ವುದೆಂತು!

ಸಂಸಾರಕ್ಕೆ ಒಗ್ಗದ ಉರಿ ಸತ್ಯಾರ್ಥಿ
ಕಾಳು ಬೇಳೆಗಾಗುವ ನಯವಂತ
ದುಷ್ಟಾರ್ಥಿ
ಸಂಗ ಸಖ್ಯಗಳೆಂಬುದ ಮಾಡ್ವುದೆಂತು!

ರಾಯ ಖರೇ ಕಾಯ್ವವನಲ್ಲ
ಜೀವ ಬಿಡುವೆದೆ ಎನಗಿಲ್ಲ
ನಡೆಯದ ದಾರಿಯ ಹುಡುಕುವುದೆಂತು!

ಹರಿ ಹರರಿಗೆ ಇರುವಿಲ್ಲ
ನರ ಗುರುವು ಬಲು ಹೊಲ್ಲ
ಭಕ್ತಿ ಎಂಬುದು ಸುಳಿವುದೆಂತು!

ನಾಳೆಯ ಬೆಳಗು ಎಂತೋ ಏನೋ
ಇಂದಿನ ಇರುಳು ಕಗ್ಗತ್ತಲು
ನಾನು ಯಾರೆಂದು ಅರಿವುದೆಂತು!